# ಯುವಕರಲ್ಲಿ ನೈತಿಕತೆ

ಎಲ್. ಶೋಭಾ ಆನಂದ

ನವಭಾರತವನ್ನು ಕಟ್ಟುವವರು ಯುವಕರು ಎಂದರು ಸ್ವಾಮೀಜಿ. ಅಂಥ ಯುವಕರ ಬೆಳವಣಿಗೆ ನೈತಿಕ, ಆಧ್ಯಾತ್ಮಿಕ ನೆಲೆಗಟ್ಟಿನ ಮೇಲೆ ನಿಂತಿರಬೇಕು. ಪ್ರಸ್ತುತ ಬದಲಾದ ಸಮಾಜದಲ್ಲಿ ಇದೊಂದು ಕಠಿಣ ಸವಾಲಾಗಿದೆ. ಈ ಕುರಿತು ವಿವರಿಸಿರುವ ಲೇಖಕಿ ಮೈಸೂರು ಸದ್ವಿದ್ಯಾ ಶಾಲೆಯಲ್ಲಿ ಕನ್ನಡ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ನೈತಿಕ ಮೌಲ್ಯಗಳ ಬಗ್ಗೆ ಆಲೋಚಿಸುವಾಗ ಸ್ವಾಮಿ ವಿವೇಕಾನಂದರ ದಿವ್ಯವಾಣಿಯನ್ನು ಉದ್ಧರಿಸಲೇಬೇಕು. ಆ ವಾಣಿ ಹೀಗಿದೆ: ''ನಮಗಿಂದು ಕಬ್ಬಿಣದಂತಹ ಮಾಂಸಖಂಡ, ಉಕ್ಕಿನಂತಹ ನರಮಂಡಲ ಹಾಗೂ ವಿದ್ಯುಚ್ಛಕ್ತಿಯಂತಹ ಮನೋಬಲವುಳ್ಳ ಯುವಕರು ಬೇಕು; ಅವರು ಶಾಂತರೂ ಸೂಕ್ಷ್ಮಮತಿಗಳೂ ಪ್ರಾಮಾಣಿಕರೂ ಕಾಮ-ಕಾಂಚನ, ಹೆಸರು ಕೀರ್ತಿಗಳ ಹುಚ್ಚಿಲ್ಲದವರೂ ಆಗಿರಬೇಕು.''

ಯುವಕರೆಂದರೆ ಉತ್ಸಾಹ, ಶಕ್ತಿ, ಚೈತನ್ಯ, ಆಶಾವಾದದ ಪ್ರತೀಕ. ಹೊಸಹೊಸ ಆಲೋಚನೆ - ಚಿಂತನೆಗಳು ಯುವ ಮನಸ್ಸುಗಳಿಂದಲೇ ಚಿಮ್ಮಬೇಕು. ಈ ಎಲ್ಲಾ ಭಾವನೆಗಳು ಹೊಮ್ಮುವಾಗ - ಚಲಿಸುವಾಗ ಅದರ ಮಾರ್ಗ ಮತ್ತು ಅದು ಸೇರುವ ದಾರಿ ಇತ್ಯಾತ್ಮಕವಾಗಿರಬೇಕಾಗುತ್ತದೆ. ಅವು ಹರಿಯುವ ರಭಸದಲ್ಲಿ ಯಾವಯಾವುದನ್ನೋ ಸೇರಿಸಿ ಕೊಚ್ಚಿಕೊಂಡು ಹೋಗುವ ಸಾಧ್ಯತೆಯಿದೆ. ಆದುದರಿಂದಲೇ ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ಯುವಕರು ಸೂಕ್ಷ್ಮಮತಿಗಳೂ ಶಾಂತರೂ ಆಗಿರಬೇಕು ಎಂದು.

ಇಂದು ಕಣ್ಮರೆಯಾಗುತ್ತಿರುವ ನೈತಿಕ ಮೌಲ್ಯಗಳ ಬಗ್ಗೆ ಚಿಂತಿಸಲೂ ಸ್ಥೈರ್ಯ ಬೇಕಾಗಿದೆ. ನಾವು ನಮ್ಮ ಆಲೋಚನೆಯಂತೆಯೇ ಇರುತ್ತೇವೆ. ಈ ನೈತಿಕ ಮೌಲ್ಯಗಳು ಕೇವಲ ಯುವಕರಿಗೆ ಮಾತ್ರ ಸೀಮಿತವೆ? ಹಾಗಲ್ಲದೆ, ಎಲ್ಲರಲ್ಲೂ ಎಲ್ಲಾ ಸಂಬಂಧ - ಕರ್ತವ್ಯ ನಿಭಾವಣೆಯಲ್ಲಿ ಇರಬೇಕಾದುದು ಅತ್ಯಾವಶ್ಯಕ.

ಒಂದು ಮಗು ನೈತಿಕ ಪಾಠವನ್ನು ತನ್ನ ಮನೆಯಿಂದಲೇ ಕಲಿಯುತ್ತದೆ. 'Charity bigins at home' ಎಂಬ ಮಾತಿದೆ. ಹಾಗೇಯೆ ನೈತಿಕ ಮೌಲ್ಯಗಳೂ ಕೂಡ. ತನ್ನ ಅಪ್ಪ ಅವನ ತಂದೆ - ತಾಯಿಯನ್ನೋ ಅಥವಾ ತನ್ನ ತಾಯಿ ತನ್ನ ಅತ್ತೆ - ಮಾವಂದಿರನ್ನೋ ಕಾಣುವ ಬಗೆಯನ್ನು ಮಗು ಸೂಕ್ಷ್ಮವಾಗಿ ಗಮನಿಸುತ್ತಿರುತ್ತದೆ. ಅದು ಯಾವುದೇ ಪಠ್ಯವಿಲ್ಲದೆ ಕಲಿಯುವ ಪಾಠವಾಗಿರುತ್ತದೆ. ಆದರೆ ಇದು ಪೋಷಕರಿಗೆ ಕಠಿಣತಮ ಪರೀಕ್ಷೆಯಾಗಬಹುದು. ಅವರ ಜೀವನಶೈಲಿ ಮಗುವಿಗೆ ತೆರೆದ ಪುಸ್ತಕ. ಮನೆಯಲ್ಲಿ ನೈತಿಕ ಮೌಲ್ಯಗಳೇ ಪೋಷಕರಿಗೆ ಜೀವನ ವಿಧಾನವೋ ಮನೋಧರ್ಮವೋ ಆಗಿದ್ದರೆ ಅದು ಸಮಸ್ಯೆ ಆಗಲಾರದು. ಅದರಲ್ಲಿ ಪ್ರಾಮಾಣಿಕತೆ ಮತ್ತು ತಾಳ್ಮೆಯ ಪಾತ್ರ ಬಹಳ ಮಹತ್ವದ್ದು.

ಯುವಕರ ನೈತಿಕ ಮೌಲ್ಯಗಳ ಮೂಲಸೆಲೆ ಶಿಕ್ಷಣದಲ್ಲಿ ಇರಬೇಕಾಗುತ್ತದೆ. ವಿದ್ಯಾರ್ಥಿಗಳ ಬದುಕಿನಲ್ಲಿ ಶಿಕ್ಷಕರು 'ಗುರುತರ' ಪಾತ್ರ ವಹಿಸಲೇಬೇಕು. ಅದು ಪ್ರಜ್ಞಾಪೂರ್ವಕವಾಗಿ, ಸ್ವಇಚ್ಛೆಯಿಂದ ಕೂಡಿ ಜವಾಬ್ದಾರಿಯುತವಾಗಿಯೇ ಆಗಬೇಕು. ಮುಂದಿನ ಕಠಿಣತಮ ಸಾಧನೆಗೆ ಶಿಕ್ಷಕರೇ ಅತ್ಯುತ್ತಮ ಮಾದರಿಯಾಗಬೇಕಾಗುತ್ತದೆ. ಇತಿಹಾಸದಲ್ಲಿ ಆಗಿಹೋದ ಸಾಧಕ ಲೋಕದ ಬೆಳಕಿಂಡಿಯನ್ನು ಅವರೇ ಸ್ವತಃ ತೋರಿಸಬೇಕಾಗುತ್ತದೆ.

ಗುರು - ಗೋವಿಂದ
ಇಬ್ಬರು ಎದುರು ನಿಂತಿದ್ದಾರೆ!
ಯಾರನ್ನು ನಮಸ್ಕರಿಸಲಿ?
ಮೊದಲು ಗುರುವಿಗೆ ನಮಸ್ಕಾರ -
ಯಾಕೆಂದರೆ - ಗೋವಿಂದನ ದರುಶನ
ಮಾಡಿಸಿಕೊಟ್ಟವನು ಗುರುವೇ!

ಅದೇ ರೀತಿ ಹಲವು ಜ್ಞಾನ ಶಾಖೆಗಳ ಸಾಧ್ಯತೆಗಳನ್ನು ತೋರಿಸುವವ ಗುರು. ಅವನು ಅದೇ ಸಾಧನಾ ಪಥದಲ್ಲಿ ನೂರಾರು ಸಾವಿರಾರು ಹೆಜ್ಜೆಗಳನ್ನು ಸವೆಸಿರಬೇಕಲ್ಲವೆ? ಅದು ಅವನ ನಡೆ - ನುಡಿಯಲ್ಲಿ ಪ್ರತಿಫಲನವಾಗದಿರದು. ನೈತಿಕ ಮೌಲ್ಯಗಳು ಎಲ್ಲೆಲ್ಲಿಯೂ ಇವೆ. ಕಾಣುವ ಕಣ್ಣು ಬೇಕು ಅಷ್ಟೇ. ಪುರಾಣ, ರಾಮಾಯಣ, ಮಹಾಭಾರತ, ಇತಿಹಾಸ, ಪ್ರಸ್ತುತ ಘಟನೆಗಳು ಹೀಗೆ...

ಯುವಕನಾದ ರಾಮನು ತಂದೆಯ ಮಾತನ್ನು ನಡೆಸಿಕೊಡಲು ಅರಣ್ಯಕ್ಕೆ ತೆರಳಿದ. ಅವನ ಆ ನಡೆ ಅಷ್ಟು ಸುಲಭದ್ದಲ್ಲ. ರಾಜಭೋಗ ತೊರೆದು, ನಾರುಡುಗೆಯಲ್ಲಿ ಸಹಚಾರಿಣಿಯಾದ ಸೀತೆಯ ಆ ಮನೋಬಲ ದೊಡ್ಡದು. ಇನ್ನು ಪ್ರಿಯ ಪತ್ನಿಯನ್ನು ತೊರೆದು ಅನುಜನ ಹಾದಿ ಹಿಡಿದ ಲಕ್ಷ್ಮಣನ ಬದ್ಧತೆಯು ಇನ್ನೂ ಬೆರಗಾಗಿಸುವಂಥದ್ದು. ಈ ಎಲ್ಲಾ ಮೌಲ್ಯಗಳೇ ನಮಗೆ ದಾರಿತೋರುವ ಕೈಮರಗಳು. ಯುವಕನಾದ ಕರ್ಣನಿಗೆ ಸ್ವತಃ ಶ್ರೀಕೃಷ್ಣನೇ ರಾಜ್ಯದ ಮೋಹ ತೋರಿಸಿದಾಗಲೂ ಲೋಭಿಯಾಗದೆ, ತನ್ನನ್ನು ಕಾಯ್ದ ಒಡೆಯನಿಗೆ ಕೃತಜ್ಞನಾಗಿದ್ದ ಎಂಬುದು ನೈತಿಕತೆಯ ಪ್ರತೀಕವಲ್ಲದೆ ಮತ್ತೇನು?

ಸ್ವಾಮಿ ವಿವೇಕಾನಂದರು ಅಮೆರಿಕಕ್ಕೆ ಹೋದಾಗ, ಅಲ್ಲಿ ಅವರನ್ನು ಕಂಡು ಮೆಚ್ಚಿದ ಹಲವಾರು ಮಹಿಳೆಯರು ಇದ್ದರು.

ಅವರಲ್ಲಿ ಒಬ್ಬಳು ವಿವೇಕರನ್ನು ಕೇಳಿದಳು – 'ನಾನು ನಿಮ್ಮಿಂದ ನಿಮ್ಮಂತಹ ಮಗನನ್ನು ಪಡೆಯಬಯಸುತ್ತೇನೆ.' ಅದಕ್ಕೆ ವಿವೇಕರು ಕೊಟ್ಟ ವಿವೇಕದ ಪ್ರತಿನುಡಿ – 'ಅಮ್ಮಾ, ಅದೆಲ್ಲಾ ಏಕೆ? ನಾನೇ ನಿಮಗೆ ಮಗನಾಗಿರುತ್ತೇನೆ' ಎಂಬುದಾಗಿತ್ತು. ಸಾಧನಾ ಪಥವನ್ನು ಅರಸಿ ಹೊರಟ ಯುವ ಮನಸ್ಸಿಗೆ ಇದಕ್ಕಿಂತ ಮಿಗಿಲಾದ ಮೌಲ್ಯ ಎಲ್ಲಿ ಸಿಗಲು ಸಾಧ್ಯ? ಇಂತಹ ಸಂಗತಿಗಳು ನಮಗೆ ಇನ್ನೆಷ್ಟು ಕಲಿಸಬೇಕು? ಪರಿಶುದ್ಧತೆಯು ಯುವ ಚೈತನ್ಯದ ಮತ್ತೊಂದು ಮುಖವಾಗಬೇಕು.

ಇಂದು ನಾವೆಲ್ಲಾ ಕಲ್ಪವೃಕ್ಷದ ಕೆಳಗೆ ಇದ್ದೇವೆ. ತಂತ್ರಜ್ಞಾನ, ವೈಜ್ಞಾನಿಕತೆ ನಮಗೆ ಬೇಕಾದ್ದನ್ನೆಲ್ಲಾ ಕೊಡುತ್ತಿದೆ. ಬಯಸಿದ್ದೆಲ್ಲ ಕಣ್ಮುಂದೆ ಕಾಣುತ್ತದೆ. ದೇಹ – ಮನಸ್ಸುಗಳ ಹಸಿವೆ ನೀಗಿಸುವ ಎಲ್ಲಾ ಮನರಂಜನೆಯ ಮಹಾಪೂರದಲ್ಲಿ ಕೊಚ್ಚಿಹೋಗಿ ಸಮಯ ಸೋರಿಹೋಗುವುದೇ ಅರಿಯದಾಗಿದೆ. ಬಯಸಿದ್ದನ್ನೆಲ್ಲಾ ದೊರಕಿಸಿಕೊಳ್ಳುವ ಭರದಲ್ಲಿ ಯಾವ ಪ್ರಪಾತದಲ್ಲಿ ಬೀಳುವೆವೋ ಅರಿಯೆವು. ಆದುದರಿಂದ ನಮಗೆ ಯಾವುದು ಬೇಕೆಂಬ ಅರಿವೂ ಬಹಳ ಮುಖ್ಯವಾಗಿದೆ.

ಶ್ರೀರಾಮಕೃಷ್ಣರು ಒಂದು ಅರ್ಥಪೂರ್ಣ, ಮಾರ್ಮಿಕ ದೃಷ್ಟಾಂತವನ್ನು ಹೇಳುತ್ತಾರೆ. ಒಬ್ಬ ಇದ್ದನು. ಅವನು ಕಾಡು ದಾರಿಯಲ್ಲಿ ನಡೆದು ಹೋಗುತ್ತಿರುವಾಗ ಆಯಾಸಗೊಂಡನು. ತಕ್ಷಣ ಒಂದು ಮರದ ನೆರಳನ್ನು ಆಶ್ರಯಿಸಿ ಕುಳಿತನು. ಆ ಮರ ಕಲ್ಪವೃಕ್ಷವಾಗಿತ್ತು! ಆದರೆ, ಅದು ಅವನಿಗೆ ತಿಳಿಯದು. ನಡೆದು ಆಯಾಸಗೊಂಡ ಅವನು – 'ಇಲ್ಲಿ ಮಲಗಲು ಒಂದು ಹಾಸಿಗೆ ಇದ್ದರೆಷ್ಟು ಚೆಂದವಿತ್ತು' ಎಂದು ಆಲೋಚಿಸಿದನು. ಕೂಡಲೇ ಅಲ್ಲೊಂದು ಹಾಸಿಗೆ ಬಂತು! ಅವನಿಗೆ ಬೆರಗಾಯಿತು! ಈ ಸಮಯದಲ್ಲಿ ಅವನಿಗೆ ಮತ್ತೊಂದು ಯೋಚನೆ ಬಂತು– 'ತನ್ನ ಕಾಲೊತ್ತಲು ಒಂದು ಹೆಣ್ಣಿದ್ದರೆ' ಎಂದು ಬಗೆದ. ಮರುಕ್ಷಣವೇ ಸುಂದರಿಯೊಬ್ಬಳು ಅವನ ಪಾದವನ್ನು ಒತ್ತಿ ಸೇವೆ ಮಾಡುತ್ತಿದ್ದಳು. ಅವನಿಗೆ ಆಹಾ!! ಎನಿಸಿತು. ನಂತರ 'ಹಸಿವೆಯಾಗುತ್ತಿದೆ – ಉಣಲು ಏನಾದರೂ ಸಿಗುವಂತಿದ್ದರೆ' ಎಂದು ಚಿಂತಿಸಿದನು. ಮರುಕ್ಷಣವೇ ಅದೂ ಕಣ್ಮುಂದೆ ಇತ್ತು! ಹಸಿವೆ ಹಿಂಗಿದ ಬಳಿಕ ಅವನಿಗೆ ಒಂದು ವಿಚಿತ್ರವಾದ ಯೋಚನೆಯಾಯಿತು. 'ಈ ನಿರ್ಜನ ಪ್ರದೇಶದಲ್ಲಿ ಹುಲಿ ಬಂದು ನನ್ನನ್ನು ತಿಂದರೆ?', ತಕ್ಷಣ ಹುಲಿ ಕಾಣಿಸಿಕೊಂಡು ಅವನನ್ನು ತಿಂದು ಹಾಕಿತು.

ನಮ್ಮ ಕನಸು – ಮನಸುಗಳೇ ಕಲ್ಪವೃಕ್ಷ – ಕಾಮಧೇನುಗಳು. ಅದರಿಂದ ಒಳ್ಳೆಯದನ್ನು ಪಡೆಯಬೇಕು. ಅದು ಬಿಟ್ಟು ಕೆಡುಕನ್ನೆ ಬಯಸಿ ಅದರಲ್ಲೇ ಅಳಿಯುವುದು ಶಕ್ತಿನಾಶವಲ್ಲದೆ ಮತ್ತೇನು?


**ನಮ್ಮೆದೆಯ ಕನಸುಗಳೇ ಕಾಮಧೇನು**

'ಆದಾವು ಕರೆದಾವು ವಾಂಛಿತವನು' – ಎಂಬ ಗೋಪಾಲ ಕೃಷ್ಣ ಅಡಿಗರ ವಾಣಿಯಂತೆ ಒಳ್ಳೆಯದನ್ನೇ ಕಂಡು – ಕರೆಯುವುದರಿಂದ ನಮಗೂ ಸಮಾಜಕ್ಕೂ ಒಳಿತು.

ನಾವು ಆಲೋಚಿಸುವ, ಚಿಂತಿಸುವ, ಬಯಸುವ ಎಲ್ಲವನ್ನೂ ಮುಂದಿರಿಸುವ ತಾಂತ್ರಿಕ, ಭೌತಿಕ ವಸ್ತುಗಳು ಶ್ರಮದಾಯಕ ಬದುಕಿನಿಂದ ಸಿಗುವ ಸಂತೃಪ್ತಿಯನ್ನೂ ಅದರ ಸತ್ಫಲವನ್ನೂ ನಮ್ಮಿಂದ ಕಿತ್ತುಕೊಳ್ಳುತ್ತಿವೆ.

ಭೋಗಕ್ಕಾಗಿ ಸಿಗುವ ಎಲ್ಲಾ ಸಾಧನ – ಸಲಕರಣೆಗಳು ಯುವಕರ ದಿಕ್ಕು ತಪ್ಪಿಸುತ್ತಿವೆ. ನೈತಿಕತೆ ತೀರಾ ವೈಯಕ್ತಿಕ ವಿಷಯವೆನಿಸಿದರೂ ಅದು ಸಮಷ್ಟಿಯ ಮೇಲೆ ತೀವ್ರ, ಗಂಭೀರ ಪರಿಣಾಮವನ್ನು ಬೀರದೆ ಇರದು. ಯುವಕರು ಸಮಾಜಮುಖಿಯಾಗಲು ನೈತಿಕತೆಯೇ ಅಡಿಗಲ್ಲು. ಈ ಒಳ್ಳೆಯದನ್ನು ಬೆಂಬತ್ತಿ ಹೋಗುವುದನ್ನು ಗುರು–ಹಿರಿಯರು ಕಲಿಸಬೇಕಾಗಿದೆ. ಏಕೆಂದರೆ, ನಾವು ಯಾವುದನ್ನು ಬೆನ್ನುಹತ್ತಿ ಹೋಗುತ್ತೇವೋ ಅದೇ ಸಿಗುತ್ತದೆ, ಅಲ್ಲವೆ? ✿

**ಯುವಚೇತನ**



## ಅದ್ವೈತಭಾವ

ನೀವು ಯಾವಾಗಲೂ ಪರಿಶುದ್ಧರು, ನಿತ್ಯಶುದ್ಧರು. ಯಾವುದೂ ನಿಮ್ಮ ಸ್ವಭಾವವನ್ನು ಬದಲಾಯಿಸದು, ಮುಂದೆ ಎಂದಿಗೂ ಹಾಗೆ ಬದಲಾಯಿಸಲಾರದು. ನಾನು ಅಪೂರ್ಣ, ನಾನೊಬ್ಬ ಗಂಡಸು ಅಥವಾ ಹೆಂಗಸು ಅಥವಾ ನಾನೊಬ್ಬ ಪಾಪಿ ಎಂಬುದು, ನನಗೆ ಒಂದು ಮನಸ್ಸಿದೆ, ನನಗೆ ಆಲೋಚನೆ ಇದೆ, ನಾನು ಆಲೋಚಿಸುತ್ತೇನೆ ಎಂಬುವುಗಳೆಲ್ಲ ಭ್ರಾಂತಿ; ನೀವು ಎಂದೂ ಆಲೋಚಿಸುವುದಿಲ್ಲ, ನಿಮಗೆ ಎಂದಿಗೂ ದೇಹವಿರಲಿಲ್ಲ, ನೀವು ಎಂದಿಗೂ ಅಪೂರ್ಣರಾಗಿರಲಿಲ್ಲ. ನೀವೇ ಪುಣ್ಯಾತ್ಮರಾದ ಪ್ರಪಂಚದ ಒಡೆಯರು. ಹಿಂದೆ ಇದ್ದ, ಈಗ ಇರುವ, ಮುಂದೆ ಇರಬಲ್ಲ, ಸರ್ವಕ್ಕೂ ಏಕಮಾತ್ರ ಸರ್ವಶಕ್ತನಾದ ಈಶ್ವರ; ಈ ಸೂರ್ಯ ನಕ್ಷತ್ರಗಳು, ಚಂದ್ರ ಪೃಥ್ವಿ ಗ್ರಹಗಳು ಮುಂತಾದ ವಿಶ್ವದ ಪ್ರತಿಯೊಂದು ಚೂರಿಗೂ ಅಪ್ರತಿಮ ಪರಾಕ್ರಮಶಾಲಿಯಾದ ಸಾಮ್ರಾಟನೆ ನೀವು. ಸೂರ್ಯ ಬೆಳಗುವುದು ನಿಮ್ಮಿಂದ, ತಾರೆಗಳು ಹೊಳೆಯುವುದು ನಿಮ್ಮಿಂದ, ವಸುಂಧರೆ ಸುಂದರವಾಗಿರುವುದು ನಿಮ್ಮಿಂದ. ನಿಮ್ಮ ಧನ್ಯತೆಯಿಂದ ಅವರೆಲ್ಲ ಪ್ರೀತಿಸುವುದು, ಒಬ್ಬರು ಮತ್ತೊಬ್ಬರಿಂದ ಆಕರ್ಷಿತರಾಗುವುದು. ನೀವು ಎಲ್ಲರಲ್ಲಿಯೂ ಇರುವಿರಿ, ನೀವೆ ಎಲ್ಲವೂ ಆಗಿರುವಿರಿ. ಸ್ವೀಕರಿಸುವುದು ಯಾರನ್ನು ಬಹಿಷ್ಕರಿಸುವುದು ಯಾರನ್ನು ? ನೀವೇ ಎಲ್ಲದರಲ್ಲಿರುವ ಸರ್ವವಾಗಿರುವಿರಿ. ಈ ಜ್ಞಾನ ಬಂದೊಡನೆ ಭ್ರಾಂತಿ ತಕ್ಷಣ ಅಳಿಯುವುದು.

*— ಸ್ವಾಮಿ ವಿವೇಕಾನಂದ*

# ಅಮೇರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್** ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

## ಭಾಗ ೩೩

### ಅಮೇರಿಕದಲ್ಲಿ ಸ್ವಾಮಿ ವಿವೇಕಾನಂದರ ಕಾರ್ಯ – ೧

ಸ್ವಾಮಿ ವಿವೇಕಾನಂದರು ಈ ಯುಗದ ಮಹಾ ಪ್ರವಾದಿಗಳು. ಅವರು ಕ್ರೈಸ್ತ ಮತಾಂಧರ ಜೊತೆಗೆ ಅವಿರತವಾಗಿ ಹೋರಾಡುವಂಥ ಪರಿಸ್ಥಿತಿ ಬಂದದ್ದು ಏತಕ್ಕಾಗಿ? ಅದರ ಹಿಂದೆ ಇದ್ದ ಉದ್ದೇಶವಾದರೂ ಏನು? ಸ್ವಾಮೀಜಿ ಡೆಟ್ರಾಯ್ಟ್ ನಗರದ ತಮ್ಮ ವಾಸ್ತವ್ಯದ ಸಮಯದಲ್ಲಿ ಅಪಾರ ಮಾನಸಿಕ ಸಂಕಷ್ಟವನ್ನು ಅನುಭವಿಸಬೇಕಾಯಿತು. ಈ ಅವಧಿಯ ನಿಜವಾದ ಅರ್ಥವೇನು? ಇದಲ್ಲದೆ ಲೆಕ್ಚರ್ ಬ್ಯೂರೋ ಕೂಡ ಸ್ವಾಮೀಜಿಯವರಿಗೆ ಮಾಡಿದ ಮೋಸವು ಅವರನ್ನು ಬಹಳಷ್ಟು ಧೃತಿಗೆಡಿಸಿತ್ತು. ಆ ಸಂಸ್ಥೆಯ ಕಬಂಧ ಬಾಹುಗಳಿಂದ ಬಿಡಿಸಿಕೊಳ್ಳಲು ಸ್ವಾಮೀಜಿ ಬಹಳಷ್ಟು ಕಷ್ಟಪಡಬೇಕಾಯಿತು. ಇದಲ್ಲದೆ ಸ್ವಾಮೀಜಿ ಅಮೇರಿಕದ ಉದ್ದಗಲಕ್ಕೂ ಎಡೆಬಿಡದೆ ಸಂಚರಿಸಿದರು. ಆ ಕಾಲದಲ್ಲಿ ಅನೇಕ ಕಷ್ಟನಷ್ಟಗಳನ್ನು ಅನುಭವಿಸಿದರು. ಅದರಲ್ಲೂ ಅಮೇರಿಕದ ಪೂರ್ವದೇಶಗಳ ಪ್ರವಾಸವು ಅತ್ಯಂತ ಪರಿಶ್ರಮದಾಯಕವಾಗಿತ್ತು. ಒಮ್ಮೆ ತಾವು ಪಟ್ಟ ದೈಹಿಕ ಮತ್ತು ಮಾನಸಿಕ ಆಯಾಸಗಳ ಬಗ್ಗೆ ಅವರು ತಮ್ಮ ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ: ''ಪ್ರವಚನಗಳನ್ನು ನೀಡಲು ನಾನು ಕೆಲವೊಮ್ಮೆ ಅತ್ಯಂತ ಭಯಂಕರವಾದ ಶೀತದ ವಾತಾವರಣವಿರುವ ಚಳಿಗಾಲದ ಸಮಯದಲ್ಲಿ ಗಂಟೆಗಟ್ಟಲೆ ಹಿಮಾಚ್ಛಾದಿತ ಪರ್ವತಶ್ರೇಣಿಗಳಲ್ಲಿ ಪ್ರಯಾಣ ಮಾಡಬೇಕಾಗಿತ್ತು. ಕೆಲವೊಮ್ಮೆ ರಾತ್ರಿಯೆಲ್ಲ ಪ್ರಯಾಣ ಮಾಡಿ, ಬೆಳಗ್ಗೆ ಒಂದು ಗಂಟೆ ಅಥವಾ ಎರಡು ಗಂಟೆಗೆ ನಾನು ತಲುಪಬೇಕಾದ ಸ್ಥಳವನ್ನು ತಲುಪುತ್ತಿದ್ದೆನು.''



ಸ್ವಾಮಿ ಅಭೇದಾನಂದರ ಒಂದು ಪ್ರವಚನದಿಂದ ಕೂಡ ನಾವು ಸ್ವಾಮಿ ವಿವೇಕಾನಂದರ ಕಠಿಣ ಪರಿಶ್ರಮದ ಬಗ್ಗೆ ಸ್ವಲ್ಪ ತಿಳಿದುಕೊಳ್ಳಬಹುದು. ಅವರು ತಮ್ಮ 'ಸ್ವಾಮಿ ವಿವೇಕಾನಂದರು ಮತ್ತು ಅವರ ಕಾರ್ಯ' ಎಂಬ ತಮ್ಮ ಭಾಷಣದಲ್ಲಿ ಹೀಗೆ ಹೇಳುತ್ತಾರೆ: ''ಕೆಲವೊಮ್ಮೆ ಸ್ವಾಮೀಜಿಯವರನ್ನು ದೂರದೂರದ ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರು ಒಂದೇ ದಿನದಂದು ಪ್ರವಚನ ಮಾಡುವಂತೆ ಆಹ್ವಾನಿಸುತ್ತಿದ್ದರು. ಅಂಥ ಪ್ರತಿಯೊಂದು ಸಂದರ್ಭದಲ್ಲಿಯೂ ಸ್ವಾಮೀಜಿ ಈ ಬಗೆಯ ಆಹ್ವಾನವನ್ನು ಒಪ್ಪಿಕೊಳ್ಳುತ್ತಿದ್ದರು. ಇದಕ್ಕಾಗಿ ಅವರು ರೈಲುಗಾಡಿ ಅಥವಾ ಇನ್ನಾವುದಾದರೂ ಸಾಧನದ ಮೂಲಕದ ಗಂಟೆಗಟ್ಟಲೆ ಪ್ರಯಾಣ ಮಾಡುತ್ತಿದ್ದರು.''

ಸ್ವಾಮೀಜಿ ಇಷ್ಟೊಂದು ಕಷ್ಟವನ್ನು ಏತಕ್ಕೆ ತಾನೇ ತಮ್ಮ ತಲೆಯ ಮೇಲೆ ಹೊತ್ತುಕೊಂಡರು ಎಂಬ ಪ್ರಶ್ನೆ ನಮ್ಮ ಮನಸ್ಸಿನಲ್ಲಿ ಮೂಡಬಹುದು. ಇದರ ಹಿಂದಿನ ಉದ್ದೇಶ ಏನು ತಾನೇ ಇತ್ತು ಎಂಬ ಸಂದೇಹವೂ ಉದ್ಭವವಾಗಬಹುದು. ಸ್ವಾಮೀಜಿಯವರ ಕಡುಕಷ್ಟದ ಈ ಅವಧಿಯು ಒಟ್ಟಾರೆ ಸ್ವಾಮೀಜಿಯವರ ಜೀವಿತ ಕಾರ್ಯದ ಸನ್ನಿವೇಶದಲ್ಲಿ ಯಾವ ರೀತಿಯ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ ಎನ್ನುವುದು ಕೂಡ ನಾವು ವಿಚಾರ ಮಾಡಬೇಕಾಗಿರುವ ವಿಷಯ. ಇದುವರೆಗೆ ಸಿಕ್ಕಿರುವ ಮಾಹಿತಿಯ ಬೆಳಕಿನಲ್ಲಿ ಈ ಎಲ್ಲ ಸಂಗತಿಗಳಿಗೆ ಸಮರ್ಪಕವಾದ ಉತ್ತರಗಳನ್ನು ಹುಡುಕುವುದು ನಮಗೆ ಸಾಧ್ಯವಾಗುವುದಿಲ್ಲ.